
# ಪರಧನ ಬೇಡ



■ **ಭೋಜರಾಜ ಸೊಪ್ಪಿಮಠ**
ಕಲೆ: ಸಂತೋಷ್ ಸಸಿಹಿತ್ಲು

ಅರುಣ್‌ಕುಮಾರ್ ಒಬ್ಬ ಆಟೊ ಡ್ರೈವರ್‌ನಾಗಿದ್ದ. ಮನೆಯಲ್ಲಿ ವಯಸ್ಸಾದ ತಂದೆ ತಾಯಿ, ಹೆಂಡತಿ ಇದ್ದರು. ಎರಡು ವರ್ಷಗಳ ಹಿಂದೆ ಮದುವೆಯಾಗಿತ್ತು, ಇನ್ನು ಮಕ್ಕಳಾಗಿರಲಿಲ್ಲ. ಬೆಳಗಿನಿಂದ ರಾತ್ರಿಯವರೆಗೆ ಆಟೊ ಓಡಿಸಿ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದ. ಹೆಂಡತಿ ಪದ್ಮಾಳಿಗೆ ಬಂಗಾರದ ಒಡವೆಗಳನ್ನು ಧರಿಸಬೇಕೆಂದು ಬಯಕೆ ಇತ್ತು. ಹಾಗಾಗಿ ಗಂಡನ ಮುಂದೆ ತನ್ನ ಆಸೆಯನ್ನೆಲ್ಲ ಹೇಳಿಕೊಳ್ಳುತ್ತಿದ್ದಳು. ಆದರೆ ಅವನ ದುಡಿತವೆಲ್ಲಾ ನಿತ್ಯ ಸಂಸಾರಕ್ಕೆ ಹಾಗೂ ಆಕಸ್ಮಿಕ ಎದುರಾಗುವ ಖರ್ಚುವೆಚ್ಚಗಳಿಗೆ ಸಾಕಾಗುತ್ತಿತ್ತು. ಹೀಗಿರುವಾಗ ಹೆಂಡತಿಯ ಆಸೆಯನ್ನು ತೀರಿಸಲು ಆಗದೆ ಚಿಂತಿಸತೊಡಗಿದ್ದ. ಕೆಲವೊಂದು ಸಾರಿ ಹಂಗಿಸಿ ಮಾತನಾಡುತ್ತಿದ್ದ ಹೆಂಡತಿಯ ಮಾತುಗಳನ್ನು ಕೇಳಿದಾಗ ಹಿಂಸೆಯಾಗುತ್ತಿತ್ತು.

ಅದೊಂದು ಬಾರಿ ಇಬ್ಬರು ಮಹಿಳೆಯರು ಬಂದು ತಮ್ಮನ್ನು ಮನೆಗೆ ಬಿಡುವಂತೆ ಕೋರಿದರು. ಅವರನ್ನು ತನ್ನ ಆಟೊದಲ್ಲಿ ಕುಳ್ಳಿರಿಸಿಕೊಂಡು ಅರುಣ್‌ಕುಮಾರ್, ಅವರು ತಿಳಿಸಿದ ವಿಳಾಸಕ್ಕೆ ಹೋಗಿ ಅವರನ್ನು ಬಿಟ್ಟು ಪ್ರತಿಯಾಗಿ ಮೊದಲೇ ಮಾತನಾಡಿದಂತೆ ಹಣವನ್ನು ಪಡೆದು ಮತ್ತೆ ಬಸ್ ನಿಲ್ದಾಣದತ್ತ ಬಂದ. ಅಲ್ಲಿಗೆ ಬರುತ್ತಲೇ ದಂಪತಿಯೊಬ್ಬರು ಬಂದು 'ವಿದ್ಯಾನಗರಕ್ಕೆ ಬರುತ್ತೀಯಾ?' ಎಂದು ಕೇಳಿದರು. ಅರುಣ್‌ಕುಮಾರ್ ಅವರರನ್ನು ಒಳಗೆ ಕುಳಿತುಕೊಳ್ಳಲು ಹೇಳಿದ. 'ನಿಮ್ಮ ಈ ಬ್ಯಾಗ್ ಮುಂದಿಟ್ಟುಕೊಳ್ಳಿ' ಆ ದಂಪತಿ ಆಟೊ ಹತ್ತುವ ಮುನ್ನ ಹೇಳಿದರು. ಅರುಣ್‌ಕುಮಾರ್ ಹಿಂದಿರುಗಿ ನೋಡಿದಾಗ ಮೊದಲು ಹತ್ತಿದ್ದ ಹೆಣ್ಣು ಮಕ್ಕಳು ಬ್ಯಾಗ್ ಅಲ್ಲಿಯೇ ಬಿಟ್ಟಿದ್ದರು. ಅದು ತನ್ನದಲ್ಲವೆಂದು ಬಿಟ್ಟರೆ ಅವರು ಏನೆಂದುಕೊಳ್ಳುತ್ತಾರೋ ಏನೋ ಎಂದೆನಿಸಿ ಆ ಬ್ಯಾಗನ್ನು ಮುಂದಕ್ಕೆ ತೆಗೆದುಕೊಂಡು ಅವರನ್ನು ಒಳಗೆ ಕುಳ್ಳಿರಿಸಿ ಅವರು ಹೇಳಿದ ಜಾಗಕ್ಕೆ ಹೋಗಿ ಬಿಟ್ಟು ಬಂದ. ದಾರಿಯುದ್ದಕ್ಕೂ ಅವನಿಗೆ ಆ ಬಗ್ಗೆ ನಾನಾ ಯೋಚನೆ. ಅದರ ಒಳಗೆ ಏನಿರಬಹುದು? ತನ್ನ ಹೆಂಡತಿಯ ಆಸೆಯನ್ನು ಈಡೇರಿಸಲು ಸಾಧ್ಯವಾಗುವಂತಹ ವಸ್ತು ಅಥವಾ ಹಣ ಅದರಲ್ಲಿ ಸಿಗಬಹುದಾ? ತನ್ನ ಮುಂದಿರುವ ಯೋಜನೆಗೆ ಪರಿಹಾರ ಕಾಣಬಹುದಾ? ಎಂದೆಲ್ಲ ಯೋಚಿಸಿದ. ಅವನಿಗೆ ಕುತೂಹಲ ತಡೆದುಕೊಳ್ಳಲಾಗಲಿಲ್ಲ. ನಿರ್ಜನ ಪ್ರದೇಶದಲ್ಲಿ ಆಟೊ ನಿಲ್ಲಿಸಿ ಬ್ಯಾಗನ್ನು ತೆರೆದು ನೋಡಿದ. ಅದರಲ್ಲಿ ಹೆಣ್ಣು ಮಕ್ಕಳ ಬಟ್ಟೆಗಳು ಇದ್ದವು. ಪಕ್ಕದಲ್ಲಿ ಒಂದು ಪರ್ಸ್. ಅದನ್ನು ತೆರೆದು ನೋಡಿದಾಗ ಬಂಗಾರದ ಚೈನ್, ತಾಳಿಸರ ಜೊತೆಗೆ ತುಸು ಹಣ ಕಂಡಿತು. ಅವನ ಆನಂದಕ್ಕೆ ಎಣೆಯೇ ಇರಲಿಲ್ಲ. ಆ ಖುಷಿಯನ್ನು ಹೆಂಡತಿಯೊಂದಿಗೆ ಹಂಚಿಕೊಳ್ಳೋಣವೆಂದು ಹೆಂಡತಿ ಪದ್ಮಾಳಿಗೆ ಫೋನ್ ಮಾಡಿ ನಡೆದ ಘಟನೆ ಎಲ್ಲವನ್ನೂ ತಿಳಿಸಿದ. ನಿನ್ನಾಸೆ ಈಡೇರಿತೆಂದೂ, ಇಂದೇ ಸಾಯಂಕಾಲ ನಿನಗೆ ಬೇಕಾದ ರೀತಿಯಲ್ಲಿ ಒಡವೆ ಮಾಡಿಸಿಕೊಳ್ಳೋಣ ಎಂದು ತಿಳಿಸಿದ. ಎಲ್ಲವನ್ನೂ ಕೇಳಿಸಿಕೊಂಡ ಹೆಂಡತಿ, 'ಬೇಡಾರಿ, ಯಾರದೋ ಸಿಕ್ಕವರ ಒಡವೆ ಅಥವಾ ಹಣದಲ್ಲಿ ನನ್ನಾಸೆಯನ್ನು ತೀರಿಸಿಕೊಳ್ಳುವ ಸಣ್ಣತನಕ್ಕೆ ನಾವು ಹೋಗುವುದು ಬೇಡ. ಪಾಪ! ಅವರು ಅದೆಷ್ಟು ಕಷ್ಟಪಟ್ಟು ಇವುಗಳನ್ನು ಹೊಂದಿಸಿಕೊಂಡಿದ್ದರೋ ಏನೋ. ಅವರ ಶಾಪ, ನಿಟ್ಟುಸಿರಿಗೆ ನಾವು ಸದಾ ಗುರಿಯಾಗಬೇಕಾಗುತ್ತದೆ. ಅದರ ಬದಲು ಪ್ರಾಮಾಣಿಕತೆಯಿಂದ ಅವರ ಬ್ಯಾಗ್ ಅವರಿಗೆ ಮರಳಿಸಿದರೆ ಅವರು ಹೆಮ್ಮೆಯಿಂದ ನಿಮ್ಮ ಪ್ರಾಮಾಣಿಕತೆಯನ್ನು ಮೆಚ್ಚಿಕೊಳ್ಳುತ್ತಾರಲ್ಲ ಅದರಲ್ಲಿನ ಸಾರ್ಥಕತೆ ನಾವು ಧರಿಸುವ ಆಭರಣದಲ್ಲಿ ಸಿಗುವುದಿಲ್ಲ. ಯಾರೋ ಮರೆತುಹೋದ ಆಭರಣವನ್ನು ಧರಿಸಿಕೊಂಡರೆ ಅದು ನನಗೆ ಒಳ್ಳೆಯದು ಆಗುವುದಿಲ್ಲ. ಕಳೆದುಕೊಂಡ ವ್ಯಕ್ತಿಗಳು ನಿಮ್ಮನ್ನು ನೋಡಿದ್ದಾರೆ ಅಷ್ಟೇ. ಆದರೆ ನೀವ್ಯಾರು, ಎಲ್ಲಿಯವರು ಅಂತ ಒಂದೂ ತಿಳಿದಿರುವುದಿಲ್ಲ. ನೀವು ಅವರ ಮನೆ ಕೂಡ ನೋಡಿದ್ದೀರಿ. ಮನೆಗೆ ಹೋಗಿ ಕೊಟ್ಟು ಬಂದರೆ ನಮ್ಮ ಒಳ್ಳೆಯತನ ನಮ್ಮನ್ನು ಕೊನೆಯವರೆಗೂ ಕೈ ಹಿಡಿಯುತ್ತದೆ. ದಯವಿಟ್ಟು ಅವರಿಗೆ ಬ್ಯಾಗ್ ಮುಟ್ಟಿಸಿ ಬನ್ನಿ. ನಮಗೆ ಯೋಗ್ಯತೆ ಇದ್ದಾಗ ಒಡವೆ ಮಾಡಿಸಿಕೊಳ್ಳೋಣ' ಎಂದಳು.

ಅರುಣ್‌ಗೆ ತನ್ನ ಹೆಂಡತಿ ಪದ್ಮಾಳ ಮಾತನ್ನು ಕೇಳಿ ಆನಂದವಾಯಿತು. ಅವಳ ಬಗ್ಗೆ ಹೆಮ್ಮೆ ಅನಿಸಿತು. ಬ್ಯಾಗ್ ಮುಟ್ಟಿಸಿ ಬರೋಣವೆಂದು ಕಳೆದುಕೊಂಡವರ ಮನೆಯತ್ತ ತನ್ನ ಆಟೊ ಓಡಿಸಿದ.

■